# ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ವಿನಿಯಮನ) ಅಧಿನಿಯಮ, 1995

(13.02.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 39ನೇ ಸಂಪುಟದ 1ನೇ ಸಂಚಿಕೆಯಲ್ಲಿ 2 ರಿಂದ 10ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ).

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ – I
### ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು


### ಅಧ್ಯಾಯ – II
### ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ವಿನಿಯಮನ


3. ಕೇಬಲ್ ಟೆಲಿವಿಷನ್ ನೆಟ್‌ವರ್ಕನ್ನು ನೋಂದಣಿ ಮಾಡಿದ ತರುವಾಯ ಹೊರತು ನಿರ್ವಹಣೆ ಮಾಡಬಾರದು
4. ಕೇಬಲ್ ಆಪರೇಟರನಾಗಿ ನೋಂದಣಿ
4ಎ. ಅಡ್ರೆಸಬಲ್ ಸಿಸ್ಟಂ ಮೂಲಕ ಕಾರ್ಯಕ್ರಮಗಳ ಪ್ರಸರಣ, ಇತ್ಯಾದಿ
5. ಕಾರ್ಯಕ್ರಮ ಸಂಹಿತೆ
6. ಜಾಹೀರಾತು ಸಂಹಿತೆ
7. ರಿಜಿಸ್ಟರಿನ ನಿರ್ವಹಣೆ
8. ದೂರದರ್ಶನ ಚಾನೆಲ್‌ಗಳ ಕಡ್ಡಾಯ ಪ್ರಸರಣ
9. ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನಲ್ಲಿ ಉತ್ತಮ ಗುಣಮಟ್ಟದ ಉಪಕರಣದ ಬಳಕೆ
10. ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ಯಾವುದೇ ದೂರಸಂಪರ್ಕ ವ್ಯವಸ್ಥೆಯೊಂದಿಗೆ ಹಸ್ತಕ್ಷೇಪ ಮಾಡದಿರುವುದು


### ಅಧ್ಯಾಯ – III
### ನಿರ್ದಿಷ್ಟ ಉಪಕರಣದ ವಶಾವಣೆ ಮತ್ತು ಮುಟ್ಟುಗೋಲು


11. ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಕಾರ್ಯಾಚರಣೆಗಾಗಿ ಉಪಯೋಗಿಸುವ ಉಪಕರಣವನ್ನು ವಶಪಡಿಸಿಕೊಳ್ಳಲು ಅಧಿಕಾರ
12. ಮುಟ್ಟುಗೋಲು
13. ಉಪಕರಣದ ವಶಾವಣೆಯು ಅಥವಾ ಮುಟ್ಟುಗೋಲು ಇತರ ಶಿಕ್ಷೆಯೊಂದಿಗೆ ಹಸ್ತಕ್ಷೇಪ ಮಾಡದಿರುವುದು
14. ವಶಪಡಿಸಿಕೊಂಡ ಉಪಕರಣದ ಕೇಬಲ್ ಆಪರೇಟರನಿಗೆ ಅವಕಾಶವನ್ನು ಕೊಡುವುದು
15. ಅಪೀಲು

## ಅಧ್ಯಾಯ – IV
## ಅಪರಾಧಗಳು ಮತ್ತು ದಂಡನೆಗಳು

16. ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ
17. ಕಂಪನಿಗಳಿಂದ ಅಪರಾಧಗಳು
18. ಅಪರಾಧಗಳ ಸಂಜ್ಞೇಯತೆ

## ಅಧ್ಯಾಯ – V
## ಸಂಕೀರ್ಣ

19. ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳ ಪ್ರಸರಣವನ್ನು ನಿಷೇಧಿಸುವ ಅಧಿಕಾರ
20. ಸಾರ್ವಜನಿಕ ಹಿತದೃಷ್ಟಿಯಿಂದ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಕಾರ್ಯಾಚರಣೆಯನ್ನು ನಿಷೇಧಿಸುವ ಅಧಿಕಾರ
21. ಇತರೆ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗಿಲ್ಲ
22. ನಿಯಮಗಳನ್ನು ರಚಿಸಲು ಅಧಿಕಾರ
23. ನಿರಸನ ಮತ್ತು ಉಳಿಸುವಿಕೆಗಳು

## ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ವಿನಿಯಮನ) ಅಧಿನಿಯಮ, 1995

(1995ರ ಅಧಿನಿಯಮ ಸಂಖ್ಯೆ 7)

[25ನೇ ಮಾರ್ಚ್, 1995]

ದೇಶದಲ್ಲಿನ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ ಕಾರ್ಯಾಚರಣೆಯನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳನ್ನು ವಿನಿಯಮಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ವಿನಿಯಮನ) ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು 1994ರ ಸೆಪ್ಟೆಂಬರ್ 29ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿಕೃತ ಅಧಿಕಾರಿ" ಎಂದರೆ ಅವನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿನ,–

(i) ಜಿಲ್ಲಾ ಮ್ಯಾಜಿಸ್ಟ್ರೇಟ್; ಅಥವಾ

(ii) ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್; ಅಥವಾ

(iii) ಪೊಲೀಸ್ ಕಮೀಷನರ್

– ಎಂದು ಅರ್ಥ ಮತ್ತು ಅದು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ನಿರ್ಧರಿಸಬಹುದಾದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಿಗಾಗಿ ಅಧಿಕೃತ ಅಧಿಕಾರಿಯೆಂದು ಆ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ಯಾರೇ ಇತರ ಅಧಿಕಾರಿಯನ್ನು ಒಳಗೊಳ್ಳುತ್ತದೆ.

(ಎಎ) "ಕೇಬಲ್ ಆಪರೇಟರ್" ಎಂದರೆ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಮೂಲಕ ಕೇಬಲ್ ಸೇವೆಯನ್ನು ಒದಗಿಸುವ ಅಥವಾ ಅದನ್ನು ಅನ್ಯಥಾ ನಿಯಂತ್ರಿಸುವ ಅಥವಾ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ವ್ಯವಸ್ಥಾಪನೆ ಮತ್ತು ಕಾರ್ಯಾಚರಣೆಗೆ ಜವಾಬ್ದಾರನಾಗಿರುವ ಯಾರೇ ವ್ಯಕ್ತಿ ಎಂದು ಅರ್ಥ;

(ಬಿ) "ಕೇಬಲ್ ಸೇವೆ" ಎಂದರೆ ಯಾವುವೇ ಪ್ರಸಾರಿತ ದೂರದರ್ಶನ ಸಂಕೇತಗಳನ್ನು ಕೇಬಲ್‌ಗಳ ಮೂಲಕ ಮರು–ಪ್ರಸರಣ ಮಾಡುವುದೂ ಒಳಗೊಂಡಂತೆ ಕಾರ್ಯಕ್ರಮಗಳನ್ನು ಕೇಬಲ್‌ಗಳ ಮೂಲಕ ಪ್ರಸರಣ ಮಾಡುವುದು ಎಂದು ಅರ್ಥ;

(ಸಿ) "ಕೇಬಲ್ ಟೆಲಿವಿಷನ್ ನೆಟ್‌ವರ್ಕ್" ಎಂದರೆ ಬಹು ಸಂಖ್ಯೆಯ ಚಂದಾದಾರರು ಪ್ರಸಾರಿತ ಸಂಕೇತಗಳನ್ನು ಸ್ವೀಕರಿಸುವುದಕ್ಕಾಗಿ ಕೇಬಲ್ ಸೇವೆಯನ್ನು ಒದಗಿಸಲು ವಿನ್ಯಾಸಗೊಳಿಸಿದ ಸೀಮಿತ ಪ್ರಸರಣ ಮಾರ್ಗಗಳಿಗೆ ಹಾಗೂ ಅವುಗಳಿಗೆ ಸಂಬಂಧಿಸಿದ ಸಂಕೇತ ಉತ್ಪಾದನೆ, ನಿಯಂತ್ರಣ ಮತ್ತು ವಿತರಣೆಯ ಉಪಕರಣದ ಸೆಟ್ಟನ್ನು ಒಳಗೊಂಡಿರುವ ಯಾವುದೇ ಸಿಸ್ಟಂ ಎಂದು ಅರ್ಥ;

(ಡಿ) "ಕಂಪನಿ" ಎಂದರೆ ಕಂಪನಿಗಳ ಅಧಿನಿಯಮ, 1956ರ (1956ರ 1) 3ನೇ ಪ್ರಕರಣದಲ್ಲಿ ಪರಿಭಾಷಿಸಿದ ಕಂಪನಿ ಎಂದು ಅರ್ಥ;

(ಇ) "ವ್ಯಕ್ತಿ" ಎಂದರೆ,–

(i) ಭಾರತದ ನಾಗರಿಕನಾಗಿರುವ ವ್ಯಕ್ತಿ;

(ii) ಯಾವ ವ್ಯಕ್ತಿಗಳ ಸಂಸ್ಥೆಯು ಅಥವಾ ವ್ಯಕ್ತಿಗಳ ನಿಕಾಯವು ನಿಗಮಿತವಾಗಿರಲಿ ಅಥವಾ ನಿಗಮಿತವಾಗಿಲ್ಲದಿರಲಿ, ಅದರ ಸದಸ್ಯರು ಭಾರತದ ನಾಗರಿಕರಾಗಿರುವರೋ ಆ ವ್ಯಕ್ತಿಗಳ ಸಂಸ್ಥೆ ಅಥವಾ ವ್ಯಕ್ತಿಗಳ ನಿಕಾಯ;

(iii) ಯಾವ ಕಂಪನಿಯಲ್ಲಿ ಶೇಕಡ ಐವತ್ತೊಂದಕ್ಕಿಂತ ಕಡಿಮೆ ಇಲ್ಲದ ಸಂದಾಯಿತ ಷೇರು ಬಂಡವಾಳವನ್ನು ಭಾರತದ ನಾಗರಿಕರು ಹೊಂದಿರುವರೋ ಆ ಕಂಪನಿ

– ಎಂದು ಅರ್ಥ.

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಜಿ) "ಕಾರ್ಯಕ್ರಮ" ಎಂದರೆ ಯಾವುದೇ ದೂರದರ್ಶನ ಪ್ರಸಾರ ಎಂದು ಅರ್ಥ ಮತ್ತು ಇದರಲ್ಲಿ,–

(i) ವೀಡಿಯೋ ಕ್ಯಾಸೆಟ್ ರೆಕಾರ್ಡರ್‌ಗಳ ಅಥವಾ ವೀಡಿಯೋ ಕ್ಯಾಸೆಟ್ ಪ್ಲೇಯರ್‌ಗಳ ಮೂಲಕ ಸಿನಿಮಾಗಳ, ಕಥಾ ಚಲನಚಿತ್ರಗಳ, ನಾಟಕಗಳ, ಜಾಹೀರಾತುಗಳ ಮತ್ತು ಧಾರಾವಾಹಿಗಳ ಪ್ರದರ್ಶನ;

(ii) ಯಾವುದೇ ಶ್ರವ್ಯ ಅಥವಾ ದೃಶ್ಯ ಅಥವಾ ಶ್ರವ್ಯ–ದೃಶ್ಯ ನೇರ ಪ್ರಸಾರ ಅಥವಾ ನೇರ ನಿರೂಪಣೆ

– ಇವು ಒಳಗೊಳ್ಳುತ್ತದೆ ಮತ್ತು "ಕಾರ್ಯಕ್ರಮ ರೂಪಣ ಸೇವೆ" ಎಂಬ ಅಭಿವ್ಯಕ್ತಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಹೆಚ್) "ನೋಂದಣಿ ಪ್ರಾಧಿಕಾರ" ಎಂದರೆ ಈ ಅಧಿನಿಯಮದ ಮೇರೆಗೆ ನೋಂದಣಿ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರ ಎಂದು ಅರ್ಥ;

(ಐ) "ಚಂದಾದಾರ" ಎಂದರೆ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಸಂಕೇತಗಳನ್ನು ಮತ್ತೆ ಇತರ ಯಾರೇ ವ್ಯಕ್ತಿಗೆ ಪ್ರಸರಣ ಮಾಡದೆ ಕೇಬಲ್ ಆಪರೇಟರ್‌ನಿಗೆ ತಾನೇ ಸೂಚಿಸಿರುವ ಸ್ಥಳದಲ್ಲಿ ಸಂಕೇತಗಳನ್ನು ಸ್ವೀಕರಿಸುವ ವ್ಯಕ್ತಿ ಎಂದು ಅರ್ಥ.

## ಅಧ್ಯಾಯ – II

## ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ವಿನಿಯಮನ

**3. ಕೇಬಲ್ ಟೆಲಿವಿಷನ್ ನೆಟ್‌ವರ್ಕನ್ನು ನೋಂದಣಿ ಮಾಡಿದ ತರುವಾಯ ಹೊರತು ನಿರ್ವಹಣೆ ಮಾಡಬಾರದು.–** ಈ ಅಧಿನಿಯಮದ ಮೇರೆಗೆ ಯಾರೇ ವ್ಯಕ್ತಿಯು ಕೇಬಲ್ ಆಪರೇಟರ್ ಆಗಿ ನೋಂದಾಯಿಸಿದ ಹೊರತು ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ನಿರ್ವಹಣೆ ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ್ನು ನಿರ್ವಹಣೆ ಮಾಡುತ್ತಿದ್ದ ವ್ಯಕ್ತಿಯು, ಅಂಥ ಪ್ರಾರಂಭದಿಂದ ತೊಂಬತ್ತು ದಿನಗಳ ಅವಧಿಯವರೆಗೆ; ಮತ್ತು ಸದರಿ ಅವಧಿಯೊಳಗಾಗಿ 4ನೇ ಪ್ರಕರಣದ ಮೇರೆಗೆ ಕೇಬಲ್ ಆಪರೇಟರನಾಗಲು ನೋಂದಣಿಗಾಗಿ ಅವನು ಅರ್ಜಿಯನ್ನು ಸಲ್ಲಿಸಿದ್ದರೆ, ಆ ಪ್ರಕರಣದ ಮೇರೆಗೆ ಅವನು ನೋಂದಣಿಯಾಗುವವರೆಗೆ ಅಥವಾ ಆ ಪ್ರಕರಣದ ಮೇರೆಗೆ ಅವನಿಗೆ ನೋಂದಣಿಯನ್ನು ಮಾಡಲು ನೋಂದಣಿ ಪ್ರಾಧಿಕಾರಿಯು ನಿರಾಕರಿಸುವವರೆಗೆ, ಹಾಗೆ ಮಾಡುವುದನ್ನು ಮುಂದುವರೆಸಬಹುದು.

**4. ಕೇಬಲ್ ಆಪರೇಟರನಾಗಿ ನೋಂದಣಿ.–** (1) ಕೇಬಲ್ ಟೆಲಿವಿಷನ್ ನೆಟ್‌ವರ್ಕನ್ನು ನಿರ್ವಹಣೆ ಮಾಡುತ್ತಿರುವ ಅಥವಾ ನಿರ್ವಹಣೆ ಮಾಡಲು ಇಚ್ಛಿಸುವ ಯಾರೇ ವ್ಯಕ್ತಿಯು ಕೇಬಲ್ ಆಪರೇಟರನಾಗಿ ನೋಂದಾಯಿಸಲು ನೋಂದಣಿ ಪ್ರಾಧಿಕಾರಿಗೆ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ಫೀಜನ್ನು ಒಳಗೊಂಡಿರತಕ್ಕದ್ದು.

(3) ಅರ್ಜಿಯನ್ನು ಸ್ವೀಕರಿಸಿದ ನಂತರ, ಅರ್ಜಿದಾರನು ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಒದಗಿಸಿದ್ದಾನೆಂದು ನೋಂದಣಿ ಪ್ರಾಧಿಕಾರವು ಮನದಟ್ಟು ಮಾಡಿಕೊಳ್ಳತಕ್ಕದ್ದು ಮತ್ತು ಹಾಗೆ ಮನದಟ್ಟು ಮಾಡಿಕೊಂಡ ನಂತರ, ಅರ್ಜಿದಾರನನ್ನು ಕೇಬಲ್ ಆಪರೇಟರ್‌ನಾಗಿ ನೋಂದಾಯಿಸತಕ್ಕದ್ದು ಮತ್ತು ಅವನಿಗೆ ಅಂಥ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು:

ಪರಂತು, 2ನೇ ಪ್ರಕರಣದ (ಇ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಅವನು ಪೂರೈಸಿಲ್ಲವೆಂದು ನೋಂದಣಿ ಪ್ರಾಧಿಕಾರವು ಮನದಟ್ಟು ಮಾಡಿಕೊಂಡರೆ, ಅದು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮತ್ತು ಅರ್ಜಿದಾರನಿಗೆ ತಿಳಿಸಿ, ನೋಂದಣಿ ಮಾಡಲು ನಿರಾಕರಿಸಬಹುದು.

**4ಎ. ಅಡ್ರೆಸಬಲ್ ಸಿಸ್ಟಂ ಮೂಲಕ ಕಾರ್ಯಕ್ರಮಗಳ ಪ್ರಸರಣ, ಇತ್ಯಾದಿ.–** (1) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೊಬ್ಬ ಕೇಬಲ್ ಆಪರೇಟರನಿಗೆ ಸಂಬಂಧಿಸಿದಂತೆ, ಒಂದು ಅಡ್ರೆಸಬಲ್ ಸಿಸ್ಟಂ ಮೂಲಕ ಯಾವುದೇ ಪೇ ಚಾನೆಲ್‌ನ ಕಾರ್ಯಕ್ರಮವನ್ನು ಪ್ರಸರಣ ಅಥವಾ ಮರುಪ್ರಸರಣ ಮಾಡುವುದನ್ನು ಕಡ್ಡಾಯಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದು ಹಾಗೆ ಕಡ್ಡಾಯಗೊಳಿಸಬಹುದು ಮತ್ತು ಸಂದರ್ಭಾನುಸಾರ, ಬೇರೆ ಬೇರೆ ರಾಜ್ಯಗಳಿಗೆ, ನಗರಗಳಿಗೆ, ಪಟ್ಟಣಗಳಿಗೆ ಅಥವಾ ಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

(2) ಚಾನೆಲ್‌ಗಳ ಪ್ಯಾಕೇಜಿನಲ್ಲಿ ಸೇರಿಸಬೇಕಾದ ಮೂಲ ಸೇವಾ ಹಂತವಾಗುವ ಒಂದು ಅಥವಾ ಹೆಚ್ಚು ಫ್ರೀ–ಟು–ಏರ್ ಚಾನೆಲ್‌ಗಳನ್ನು ನಿರ್ದಿಷ್ಟಪಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಕೇಂದ್ರ ಸರ್ಕಾರವು ಮನಗಂಡರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆ ನಿರ್ದಿಷ್ಟಪಡಿಸಬಹುದು ಮತ್ತು ಮನರಂಜನೆ, ಮಾಹಿತಿ, ಶಿಕ್ಷಣ ಮತ್ತು ಅಂಥವೇ ಇತರ ಕಾರ್ಯಕ್ರಮಗಳ ಸಂಮಿಶ್ರ ಕಾರ್ಯಕ್ರಮವನ್ನು ನೀಡುವುದಕ್ಕಾಗಿ ಆಯಾಯ ಬಗೆ ಪ್ರಕಾರ ಅಂಥ ಯಾವುದೇ ಒಂದು ಅಥವಾ ಅಂಥ ಹೆಚ್ಚು ಚಾನೆಲ್‌ಗಳನ್ನು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದು.

(3) ಕೇಂದ್ರ ಸರ್ಕಾರವು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಸೂಚನೆಯಲ್ಲಿ, ಆ ಉಪಪ್ರಕರಣದ ಉದ್ದೇಶಗಳಿಗಾಗಿ, ಮೂಲ ಸೇವಾ ಹಂತದ ಚಾನಲ್‌ಗಳ ಪ್ಯಾಕೇಜಿನಲ್ಲಿ ಸೇರಿಸಬೇಕಾದ ಫ್ರೀ–ಟು–ಏರ್ ಚಾನೆಲ್‌ಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸಬಹುದು ಮತ್ತು ಸಂದರ್ಭಾನುಸಾರ ಬೇರೆ ಬೇರೆ ರಾಜ್ಯಗಳು, ನಗರಗಳು, ಪಟ್ಟಣಗಳು ಅಥವಾ ಪ್ರದೇಶಗಳಿಗಾಗಿ ಬೇರೆ ಬೇರೆ ಸಂಖ್ಯೆಗಳನ್ನು ನಿರ್ದಿಷ್ಟಪಡಿಸಬಹುದು.

(4) ಕೇಬಲ್ ಆಪರೇಟರನು, ಒದಗಿಸುವ ಮೂಲ ಸೇವಾ ಹಂತದ ಚಾನೆಲ್‌ಗಳ ಮೂಲಕ ಪ್ರಸಾರ ಮಾಡುವ ಕಾರ್ಯಕ್ರಮಗಳನ್ನು ಸ್ವೀಕರಿಸಲು ಚಂದಾದಾರನಿಂದ ಅಂಥ ಕೇಬಲ್ ಆಪರೇಟರನು ಕೇಳಬಹುದಾದ ಗರಿಷ್ಠ ಮೊಬಲಗನ್ನು ನಿರ್ದಿಷ್ಟಪಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದು ಹಾಗೆ ಮಾಡಬಹುದು.

(5) (4)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಆ ಉಪ ಪ್ರಕರಣದ ಉದ್ದೇಶಗಳಿಗಾಗಿ ಆ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಸೂಚನೆಯಲ್ಲಿ ಸಂದರ್ಭಾನುಸಾರ, ಬೇರೆ ಬೇರೆ ರಾಜ್ಯಗಳಿಗೆ, ನಗರಗಳಿಗೆ, ಪಟ್ಟಣಗಳಿಗೆ ಅಥವಾ ಪ್ರದೇಶಗಳಿಗೆ ಬೇರೆ ಬೇರೆ ಗರಿಷ್ಠ ಮೊಬಲಗುಗಳನ್ನು ನಿರ್ದಿಷ್ಟಪಡಿಸಬಹುದು.

(6) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಮೂಲ ಸೇವಾ ಹಂತದ ಕಾರ್ಯಕ್ರಮಗಳು ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ (ವಿನಿಯಮನ) ತಿದ್ದುಪಡಿ ಅಧಿನಿಯಮ, 2002ರ ಪ್ರಾರಂಭದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಬಗೆಯ ರಿಸೀವರ್ ಸೆಟ್ಟಿನ ಮೂಲಕ, ಅಂಥ ರಿಸೀವರ್ ಸೆಟ್ಟಿಗೆ ಯಾವುದೇ ರೀತಿಯಲ್ಲಿ ಜೋಡಿಸಿದ ಯಾವುದೇ ಅಡ್ರೆಸೆಬಲ್ ಸಿಸ್ಟಂ ಇಲ್ಲದೆಯೇ ಯಾರೇ ಚಂದಾದಾರನು ಸ್ವೀಕರಿಸುವಂಥವು ಆಗಿರತಕ್ಕದ್ದು.

(7) ಪ್ರತಿಯೊಬ್ಬ ಕೇಬಲ್ ಆಪರೇಟರನು, ಆ ಕೇಬಲ್ ಆಪರೇಟರನು ಒದಗಿಸಿದ ಪ್ರತಿಯೊಂದು ಪೇ ಚಾನೆಲನ್ನು ಸ್ವೀಕರಿಸುವುದಕ್ಕಾಗಿ ಸಂದಾಯ ಮಾಡಬೇಕಾದ ವಂತಿಗೆಗಳ ದರಗಳನ್ನು ಮತ್ತು ನಿಯತ ಮಧ್ಯಂತರಗಳನ್ನು ವಂತಿಗೆದಾರರಿಗೆ ನಿಯಮಿಸಿದ ರೀತಿಯಲ್ಲಿ ತಿಳಿಸತಕ್ಕದ್ದು.

(8) ಕೇಬಲ್ ಆಪರೇಟರನು, ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಸಂಕೇತಗಳನ್ನು ಗ್ರಹಿಸುವುದಕ್ಕೆ ನಿರ್ದಿಷ್ಟ ಮಾದರಿಯ ರಿಸೀವರ್ ಸೆಟ್ಟನ್ನು ಹೊಂದಿರಬೇಕೆಂದು ಯಾರೇ ಚಂದಾದಾರನನ್ನು ಅಗತ್ಯಪಡಿಸತಕ್ಕದ್ದಲ್ಲ:

ಪರಂತು, ಪೇ ಚಾನೆಲ್‌ನಲ್ಲಿ ಪ್ರಸಾರ ಮಾಡುವ ಕಾರ್ಯಕ್ರಮಗಳನ್ನು ಚಂದಾದಾರನು ಸ್ವೀಕರಿಸುವುದಕ್ಕಾಗಿ ಅವನ ರಿಸೀವರ್ ಸೆಟ್ಟಿಗೆ ಅಡ್ರೆಸಬಲ್ ಸಿಸ್ಟಮನ್ನು ಜೋಡಿಸಿ ಬಳಸತಕ್ಕದ್ದು.

(9) ಪ್ರತಿಯೊಬ್ಬ ಕೇಬಲ್ ಆಪರೇಟರನು ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಮೂಲಕ ಅಂಥ ಕೇಬಲ್ ಆಪರೇಟರನು ಒದಗಿಸಿದ ಕೇಬಲ್ ಸೇವೆಯ ಸಂಬಂಧದಲ್ಲಿ,–

(i) ಒಟ್ಟು ಚಂದಾದಾರರ ಸಂಖ್ಯೆಯ;

(ii) ಚಂದಾ ದರಗಳ;

(iii) ಮೂಲ ಸೇವಾ ಹಂತದಲ್ಲಿ ಪ್ರಸಾರ ಮಾಡಿದ ಕಾರ್ಯಕ್ರಮಗಳನ್ನು ಅಥವಾ ಪೇ ಚಾನೆಲ್‌ನಲ್ಲಿ ಪ್ರಸಾರ ಮಾಡಿದ ನಿರ್ದಿಷ್ಟ ಕಾರ್ಯಕ್ರಮವನ್ನು ಅಥವಾ ಕಾರ್ಯಕ್ರಮಗಳ ಸರಣಿಯನ್ನು ಸ್ವೀಕರಿಸುತ್ತಿರುವ ಚಂದಾದಾರರ ಸಂಖ್ಯೆಯ

– ಬಗ್ಗೆ ಮಾಹಿತಿಯನ್ನು ಒಳಗೊಂಡಿರುವ ವರದಿಯನ್ನು ನಿಯಮಿಸಿದ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಮಧ್ಯಂತರಗಳಲ್ಲಿ ಅಂಥ ವರದಿಯನ್ನು ನಿಯತಕಾಲಿಕವಾಗಿ ಸಲ್ಲಿಸತಕ್ಕದ್ದು ಮತ್ತು ಕೇಬಲ್ ಆಪರೇಟರನು ಯಾರೇ ಪ್ರಸಾರಕನಿಗೆ ಸಂದಾಯ ಮಾಡಬೇಕಾದ ಮೊಬಲಗು ಯಾವುದಾದರೂ ಇದ್ದರೆ, ಅದರ ದರವನ್ನು ಸಹ ಅದು ಒಳಗೊಂಡಿರತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಅಡ್ರೆಸಬಲ್ ಸಿಸ್ಟಂ" ಎಂದರೆ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಸಂಕೇತಗಳನ್ನು ಇಂಟಿಗ್ರೇಟೆಡ್ ಸಿಸ್ಟಂನ ಒಳಗೆ ಇಟ್ಟಿರುವ ಯಾವ ವಿದ್ಯುನ್ಮಾನ ಸಾಧನದಿಂದ ಅಥವಾ ಒಂದಕ್ಕಿಂತ ಹೆಚ್ಚು ವಿದ್ಯುನ್ಮಾನ ಸಾಧನಗಳಿಂದ, ಚಂದಾದಾರನ ಆಯ್ಕೆಯಂತೆ ಮತ್ತು ಅವನು ಕೋರಿಕೊಂಡಾಗ ಅಧಿಕೃತಗೊಳಿಸಲಾದ ಪರಿಮಿತಿಗಳೊಳಗೆ ಚಂದಾದಾರನ ಆವರಣಗಳಲ್ಲಿರುವ ಆ ಸಾಧನದಿಂದ ಅಥವಾ ಆ ಸಾಧನಗಳಿಂದ ಯಾವ ಗೂಢಲಿಪಿಯ ಅಥವಾ ಗೂಢಲಿಪಿಯಲ್ಲಿಲ್ಲದಿರುವುದರ ಸಂಕೇತದ ಅರ್ಥಗ್ರಹಣ ಮಾಡಬಹುದೋ ಅದನ್ನು ಕೇಬಲ್ ಆಪರೇಟರನು ಚಂದಾದಾರನಿಗೆ ಕಳುಹಿಸಬಹುದೋ ಆ ವಿದ್ಯುನ್ಮಾನ ಸಾಧನ ಅಥವಾ ಒಂದಕ್ಕಿಂತ ಹೆಚ್ಚು ವಿದ್ಯುನ್ಮಾನ ಸಾಧನಗಳು.

(ಬಿ) "ಮೂಲ ಸೇವಾ ಹಂತ" ಎಂದರೆ ಕೇಬಲ್ ಆಪರೇಟರನು ಯಾವ ಪ್ರದೇಶದಲ್ಲಿ ತನ್ನ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನಿಂದ ಸೇವೆಯನ್ನು ಒದಗಿಸುತ್ತಿರುವನೋ ಆ ಪ್ರದೇಶದ

ಚಂದಾದಾರರಿಗೆ ಏಕಬೆಲೆಯಲ್ಲಿ ಅವನು ಒದಗಿಸುವ ಫ್ರೀ–ಟು–ಏರ್ ಚಾನೆಲ್‌ಗಳ ಪ್ಯಾಕೇಜು ಮತ್ತು ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ವಿನಿಯಮನ) ತಿದ್ದುಪಡಿ ಅಧಿನಿಯಮ, 2002ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಮಾದರಿಯ ರಿಸೀವರ್ ಸೆಟ್‌ನಿಂದ, ಅಂಥ ರಿಸೀವರ್ ಸೆಟ್‌ಗೆ ಯಾವುದೇ ರೀತಿಯಲ್ಲಿ ಅಡ್ರೆಸಬಲ್ ಸಿಸ್ಟಂಅನ್ನು ಜೋಡಿಸದೆಯೇ ಚಂದಾದಾರರು ವೀಕ್ಷಿಸುವುದಕ್ಕಾಗಿ ಸ್ವೀಕರಿಸಬಹುದಾಗಿರುವಂಥ ಚಾನೆಲ್‌ಗಳು ಎಂದು ಅರ್ಥ;

(ಸಿ) "ಚಾನೆಲ್" ಎಂದರೆ ಕಾರ್ಯಕ್ರಮವನ್ನು ಪ್ರಸರಣ ಮಾಡುವುದಕ್ಕಾಗಿ ಬಳಸಲಾಗುವ ತರಂಗಾಂತರಗಳ ಒಂದು ಸಮೂಹ ಎಂದು ಅರ್ಥ;

(ಡಿ) ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಸಂಕೇತದ ಸಂಬಂಧದಲ್ಲಿ "ಗೂಢಲಿಪೀಕರಿಸಿದ" ಎಂದರೆ ಸ್ವೀಕರಿಸುವ ಸೂಕ್ತ ಉಪಕರಣವಿಲ್ಲದೆ ಸಂಕೇತವು ಅರ್ಥವಾಗದ ರೀತಿಯಲ್ಲಿ ಇರುವಂತೆ ವ್ಯವಸ್ಥಿತವಾಗಿ ಅಂಥ ಸಂಕೇತವನ್ನು ಬದಲಾಯಿಸುವುದು ಎಂದು ಅರ್ಥ ಮತ್ತು "ಗೂಢಲಿಪೀಕರಿಸದ" ಎಂಬ ಅಭಿವ್ಯಕ್ತಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಇ) ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಸಂಬಂಧದಲ್ಲಿ "ಫ್ರೀ–ಟು–ಏರ್ ಚಾನೆಲ್" ಎಂದರೆ ಯಾವ ಚಾನೆಲ್‌ನ ಸ್ವೀಕಾರಕ್ಕಾಗಿ ಚಂದಾದಾರನ ರಿಸೀವರ್ ಸೆಟ್ಟಿಗೆ ಜೋಡಿಸಬೇಕಾದ ಯಾವುದೇ ಅಡ್ರೆಸಬಲ್ ಸಿಸ್ಟಂಅನ್ನು ಬಳಸಬೇಕಾದ ಅಗತ್ಯವಿಲ್ಲವೋ ಆ ಚಾನೆಲ್ ಎಂದು ಅರ್ಥ;

(ಎಫ್) ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಸಂಬಂಧದಲ್ಲಿ "ಪೇ ಚಾನೆಲ್" ಎಂದರೆ ಯಾವ ಚಾನೆಲ್‌ನ ಸ್ವೀಕಾರಕ್ಕಾಗಿ ಚಂದಾದಾರನು ಅವನ ರಿಸೀವರ್ ಸೆಟ್ಟಿಗೆ ಜೋಡಿಸಬೇಕಾದ ಅಡ್ರೆಸಬಲ್ ಸಿಸ್ಟಂಅನ್ನು ಬಳಸುವ ಅಗತ್ಯವಿದೆಯೋ ಆ ಚಾನೆಲ್ ಎಂದು ಅರ್ಥ.

**5. ಕಾರ್ಯಕ್ರಮ ಸಂಹಿತೆ.–** ಯಾರೇ ವ್ಯಕ್ತಿಯು, ಯಾವುದೇ ಕಾರ್ಯಕ್ರಮವು ನಿಯಮಿಸಿದ ಸಂಹಿತೆಗೆ ಅನುಗುಣವಾಗಿದ್ದ ಹೊರತು ಅಂಥ ಕಾರ್ಯಕ್ರಮವನ್ನು ಕೇಬಲ್ ಸೇವೆಯ ಮೂಲಕ ಪ್ರಸರಣ ಅಥವಾ ಮರುಪ್ರಸರಣ ಮಾಡತಕ್ಕದ್ದಲ್ಲ.

**6. ಜಾಹೀರಾತು ಸಂಹಿತೆ.–** ಯಾರೇ ವ್ಯಕ್ತಿಯು, ಯಾವುದೇ ಜಾಹೀರಾತು ನಿಯಮಿಸಿದ ಜಾಹೀರಾತು ಸಂಹಿತೆಗೆ ಅನುಗುಣವಾಗಿದ್ದ ಹೊರತು, ಅಂಥ ಜಾಹೀರಾತನ್ನು ಕೇಬಲ್ ಸೇವೆಯ ಮೂಲಕ ಪ್ರಸರಣ ಅಥವಾ ಮರುಪ್ರಸರಣ ಮಾಡತಕ್ಕದ್ದಲ್ಲ.

**7. ರಿಜಿಸ್ಟರಿನ ನಿರ್ವಹಣೆ.–** ಪ್ರತಿಯೊಬ್ಬ ಕೇಬಲ್ ಆಪರೇಟರನು ತಿಂಗಳ ಅವಧಿಯಲ್ಲಿ ಕೇಬಲ್ ಸೇವೆಯ ಮೂಲಕ ಪ್ರಸರಣ ಮಾಡಲಾದ ಅಥವಾ ಮರುಪ್ರಸರಣ ಮಾಡಲಾದ ಕಾರ್ಯಕ್ರಮಗಳ ಬಗೆಗೆ ಸಂಕ್ಷಿಪ್ತವಾಗಿ ಸೂಚಿಸಿ ನಿಯಮಿಸಲಾದ ನಮೂನೆಯಲ್ಲಿ ಒಂದು ರಿಜಿಸ್ಟರನ್ನು ನಿರ್ವಹಿಸಿಕೊಂಡು ಬರತಕ್ಕದ್ದು ಮತ್ತು ಅಂಥ ಸದರಿ ಕಾರ್ಯಕ್ರಮಗಳ ವಾಸ್ತವಿಕ ಪ್ರಸರಣ ಅಥವಾ ಮರುಪ್ರಸರಣದ ನಂತರ ಒಂದು ವರ್ಷದ ಅವಧಿಯವರೆಗೆ ಕೇಬಲ್ ಆಪರೇಟರನು ಅಂಥ ರಿಜಿಸ್ಟರನ್ನು ನಿರ್ವಹಿಸಿಕೊಂಡು ಬರತಕ್ಕದ್ದು.

**8. ದೂರದರ್ಶನ ಚಾನೆಲ್‌ಗಳ ಕಡ್ಡಾಯ ಪ್ರಸರಣ.–** (1) ಪ್ರತಿಯೊಬ್ಬ ಕೇಬಲ್ ಆಪರೇಟರನು,–

(i) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ವಿಧಾನದಲ್ಲಿ ಮತ್ತು ಹೆಸರಿನಲ್ಲಿ ಸಂಸತ್ತಿನಿಂದ ಅಥವಾ ಅದರ ಪರವಾಗಿ ನಿರ್ವಹಿಸಿದ ಚಾನೆಲ್‌ಗಳನ್ನು;

(ii) ಕನಿಷ್ಠ ಪಕ್ಷ ಎರಡು ದೂರದರ್ಶನ ಭೌಗೋಳಿಕ ಚಾನೆಲ್‌ಗಳನ್ನು ಮತ್ತು ರಾಜ್ಯದ ಒಂದು ಪ್ರಾದೇಶಿಕ ಭಾಷೆಯ ಚಾನೆಲನ್ನು ಪ್ರಧಾನ ಬ್ಯಾಂಡಿನಲ್ಲಿ

– ಭೌಗೋಳಿಕ ತರಂಗಾಂತರಗಳಲ್ಲಿ ಒಯ್ಯುವಂಥವುಗಳಲ್ಲದ ತರಂಗಾಂತರಗಳಲ್ಲಿ ಉಪಗ್ರಹ ವ್ಯವಸ್ಥೆಯ ಮೂಲಕ ಮರುಪ್ರಸರಣ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಚಾನೆಲ್‌ಗಳನ್ನು ಅಂಥ ಚಾನೆಲ್‌ಗಳಲ್ಲಿ ಪ್ರಸರಣ ಮಾಡಿದ ಯಾವುದೇ ಕಾರ್ಯಕ್ರಮವನ್ನು ತೆಗೆದುಹಾಕದೆ ಅಥವಾ ಬದಲಾವಣೆ ಮಾಡದೆ ಮರುಪ್ರಸರಣ ಮಾಡತಕ್ಕದ್ದು.

(3) ಪ್ರಸಾರ ಭಾರತಿ (ಭಾರತ ಪ್ರಸಾರ ನಿಗಮ) ಅಧಿನಿಯಮ, 1990ರ (1990ರ 25) 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾಗಿರುವ ಪ್ರಸಾರ ಭಾರತಿಯು (ಭಾರತ ಪ್ರಸಾರ ನಿಗಮ) ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಕೇಬಲ್ ಆಪರೇಟರರು ಅವರ ಕೇಬಲ್ ಸೇವೆಯಲ್ಲಿ ಮರುಪ್ರಸರಣ ಮಾಡಬೇಕಾಗಿರುವ ಪ್ರತಿಯೊಂದು ದೂರದರ್ಶನ ಚಾನೆಲ್‌ಗಳ ಸಂಖ್ಯೆಯನ್ನು ಮತ್ತು ಹೆಸರನ್ನು ಮತ್ತು ಅಂಥ ಚಾನೆಲ್‌ಗಳನ್ನು ಸ್ವೀಕರಿಸುವ ಮತ್ತು ಮರುಪ್ರಸರಣ ಮಾಡುವ ವಿಧಾನವನ್ನು ನಿರ್ದಿಷ್ಟಪಡಿಸಬಹುದು.

**9. ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನಲ್ಲಿ ಉತ್ತಮ ಗುಣಮಟ್ಟದ ಉಪಕರಣದ ಬಳಕೆ.–** ಯಾರೇ ಕೇಬಲ್ ಆಪರೇಟರನು, ಭಾರತೀಯ ಮಾನಕಗಳ ಸಂಸ್ಥೆ ಅಧಿನಿಯಮ, 1986ರ ಉಪಬಂಧಗಳಿಗನುಸಾರವಾಗಿ ಭಾರತೀಯ ಮಾನಕಗಳ ಸಂಸ್ಥೆಯು ಭಾರತೀಯ ಮಾನಕವನ್ನು ಸ್ಥಾಪಿಸಿದ

ಮತ್ತು ಪ್ರಕಟಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ದಿನಾಂಕದಂದು ಮತ್ತು ದಿನಾಂಕದಿಂದ, ಯಾವುದೇ ಉಪಕರಣವು ಸದರಿ ಭಾರತೀಯ ಮಾನಕಕ್ಕೆ ಅನುಗುಣವಾಗಿದ್ದ ಹೊರತು ಅವನ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನಲ್ಲಿ ಅಂಥ ಉಪಕರಣವನ್ನು ಬಳಸತಕ್ಕದ್ದಲ್ಲ:

ಪರಂತು, 4ಎ ಪ್ರಕರಣದ ಉದ್ದೇಶಗಳಿಗಾಗಿ ಅಗತ್ಯಪಡಿಸಿದ ಉಪಕರಣವನ್ನು, ಸದರಿ ಉದ್ದೇಶಗಳಿಗೆ ಸದರಿ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಆ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಕೇಬಲ್ ಆಪರೇಟರನು ತನ್ನ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನಲ್ಲಿ ಅಳವಡಿಸತಕ್ಕದ್ದು.

**10. ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ಯಾವುದೇ ದೂರಸಂಪರ್ಕ ವ್ಯವಸ್ಥೆಯೊಂದಿಗೆ ಹಸ್ತಕ್ಷೇಪ ಮಾಡದಿರುವುದು.–** ಪ್ರತಿಯೊಬ್ಬ ಕೇಬಲ್ ಆಪರೇಟರನು, ತಾನು ನಿರ್ವಹಿಸುವ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ಅಧಿಕೃತ ದೂರಸಂಪರ್ಕ ಸಿಸ್ಟಂಗಳ ಕಾರ್ಯ ನಿರ್ವಹಣೆಯೊಂದಿಗೆ, ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

## ಅಧ್ಯಾಯ – III

## ನಿರ್ದಿಷ್ಟ ಉಪಕರಣದ ವಶಾವಣೆ ಮತ್ತು ಮುಟ್ಟುಗೋಲು

**11. ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಕಾರ್ಯಾಚರಣೆಗಾಗಿ ಉಪಯೋಗಿಸುವ ಉಪಕರಣವನ್ನು ವಶಪಡಿಸಿಕೊಳ್ಳಲು ಅಧಿಕಾರ.–** (1) ಯಾರೇ ಕೇಬಲ್ ಆಪರೇಟರನು 3, 4ಎ, 5, 6 ಅಥವಾ 8ನೇ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದು ಅಥವಾ ಉಲ್ಲಂಘಿಸುತ್ತಿದ್ದಾನೆಂದು ನಂಬಲು ಯಾರೇ ಅಧಿಕೃತ ಅಧಿಕಾರಿಗೆ ಕಾರಣವಿದ್ದರೆ, ಅಂಥ ಕೇಬಲ್ ಆಪರೇಟರನು ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಕಾರ್ಯಾಚರಣೆಗಾಗಿ ಉಪಯೋಗಿಸುತ್ತಿರುವ ಉಪಕರಣವನ್ನು ಅವನು ವಶಪಡಿಸಿಕೊಳ್ಳಬಹುದು.

(2) ಅಧಿಕೃತ ಅಧಿಕಾರಿಯು, ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಅಂಥ ಯಾವುದೇ ಉಪಕರಣವನ್ನು ವಶಪಡಿಸಿಕೊಳ್ಳಲಾಗಿದೆಯೋ ಅದನ್ನು ಇಟ್ಟುಕೊಳ್ಳಲು ಆ ಜಿಲ್ಲಾ ನ್ಯಾಯಾಧೀಶರ ಅನುಮೋದನೆ ಪಡೆದ ಹೊರತು, ಅದನ್ನು ವಶಪಡಿಸಿಕೊಂಡ ದಿನಾಂಕದಿಂದ ಹತ್ತು ದಿನಗಳಿಗಿಂತ ಹೆಚ್ಚಿನ ಅವಧಿಯವರೆಗೆ ಅದನ್ನು ಇಟ್ಟುಕೊಳ್ಳತಕ್ಕದ್ದಲ್ಲ.

**12. ಮುಟ್ಟುಗೋಲು.–** 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಶಪಡಿಸಿಕೊಂಡ ಉಪಕರಣವು, ಆ ಉಪಕರಣವನ್ನು ಯಾವ ಕೇಬಲ್ ಆಪರೇಟರನಿಂದ ವಶಪಡಿಸಿಕೊಳ್ಳಲಾಯಿತೋ ಆ ಕೇಬಲ್ ಆಪರೇಟರನು ಸದರಿ ಉಪಕರಣವನ್ನು ವಶಪಡಿಸಿಕೊಂಡ ದಿನಾಂಕದಿಂದ ಮೂವತ್ತು ದಿನಗಳ

ಅವಧಿಯೊಳಗಾಗಿ 4ನೇ ಪ್ರಕರಣದ ಮೇರೆಗೆ ತಾನು ಕೇಬಲ್ ಆಪರೇಟರನಾಗಿ ನೋಂದಾಯಿಸಿಕೊಂಡ ಹೊರತು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು.

**13. ಉಪಕರಣದ ವಶಾವಣೆಯು ಅಥವಾ ಮುಟ್ಟುಗೋಲು ಇತರ ಶಿಕ್ಷೆಯೊಂದಿಗೆ ಹಸ್ತಕ್ಷೇಪ ಮಾಡದಿರುವುದು.–** 11ನೇ ಪ್ರಕರಣದಲ್ಲಿ ಅಥವಾ 12ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಉಪಕರಣದ ವಶಾವಣೆಯು ಅಥವಾ ಮುಟ್ಟುಗೋಲು ಅದರಿಂದ ಬಾಧಿತನಾದ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ಶಿಕ್ಷೆಗೆ ಗುರಿಯಾಗಿರುವನೋ ಆ ಯಾವುದೇ ಶಿಕ್ಷೆ ವಿಧಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

**14. ವಶಪಡಿಸಿಕೊಂಡ ಉಪಕರಣದ ಕೇಬಲ್ ಆಪರೇಟರನಿಗೆ ಅವಕಾಶವನ್ನು ಕೊಡುವುದು.–** (1) ಕೇಬಲ್ ಆಪರೇಟರನಿಗೆ ಅಂಥ ಉಪಕರಣವನ್ನು ಯಾವ ಕಾರಣಗಳ ಮೇಲೆ ಮುಟ್ಟುಗೋಲು ಹಾಕಿಕೊಳ್ಳಲು ಉದ್ದೇಶಿಸಲಾಗಿದೆಯೋ ಆ ಕಾರಣಗಳನ್ನು ಅವನು ತಿಳಿಸಿ ಲಿಖಿತ ನೋಟೀಸನ್ನು ನೀಡಿದ ಹೊರತು ಮತ್ತು ಮುಟ್ಟುಗೋಲಿನ ವಿರುದ್ಧದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯುಕ್ತ ಕಾಲದೊಳಗಾಗಿ ಲಿಖಿತ ನಿವೇದನೆಯನ್ನು ಮಾಡಿಕೊಳ್ಳುವ ಅವಕಾಶವನ್ನು ಅವನಿಗೆ ನೀಡಿದ ಹೊರತು ಮತ್ತು ಅವನು ಆ ವಿಷಯದ ಬಗ್ಗೆ ಅಹವಾಲು ಹೇಳಿಕೊಳ್ಳಲು ಅಪೇಕ್ಷಿಸಿದರೆ, ಆ ಬಗ್ಗೆ ಅವನಿಗೆ ಒಂದು ಯುಕ್ತ ಅವಕಾಶವನ್ನು ಕೊಟ್ಟ ಹೊರತು 12ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಉಪಕರಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ನ್ಯಾಯ ನಿರ್ಣಯದ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ:

ಪರಂತು, ಉಪಕರಣವನ್ನು ವಶಪಡಿಸಿಕೊಂಡ ದಿನಾಂಕದಿಂದ ಹತ್ತು ದಿನಗಳ ಅವಧಿಯೊಳಗಾಗಿ ಅಂಥ ನೋಟೀಸನ್ನು ನೀಡದಿರುವಲ್ಲಿ, ಆ ಅವಧಿಯು ಮುಕ್ತಾಯವಾದ ನಂತರ ಯಾವ ಕೇಬಲ್ ಆಪರೇಟರನ ಸ್ವಾಧೀನದಿಂದ ಅದನ್ನು ವಶಪಡಿಸಿಕೊಳ್ಳಲಾಗಿತ್ತೋ ಅವನಿಗೆ ಅಂಥ ಉಪಕರಣವನ್ನು ಹಿಂತಿರುಗಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಉಪಬಂಧಗಳನ್ನು ಸಾಧ್ಯವಾಗಬಹುದಾದಷ್ಟರಮಟ್ಟಿಗೆ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ವ್ಯವಹರಣೆಗೆ ಅನ್ವಯಿಸತಕ್ಕದ್ದು.

**15. ಅಪೀಲು.–** (1) ಉಪಕರಣದ ಮುಟ್ಟುಗೋಲಿನ ಬಗ್ಗೆ ನ್ಯಾಯನಿರ್ಣಯ ಮಾಡುವ ನ್ಯಾಯಾಲಯದ ಯಾವುದೇ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ನ್ಯಾಯಾಲಯದ

ತೀರ್ಮಾನದ ವಿರುದ್ಧ ಯಾವ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಲು ಅವಕಾಶವಿರುವುದೋ ಆ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲು ನ್ಯಾಯಾಲಯವು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಯಾವ ತೀರ್ಮಾನದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ತೀರ್ಮಾನವನ್ನು ಸ್ಥಿರೀಕರಿಸುವ, ಮಾರ್ಪಾಟುಗೊಳಿಸುವ ಅಥವಾ ಪರಿಷ್ಕರಿಸುವ ಬಗ್ಗೆ ಅದು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು; ಅಥವಾ ಅವಶ್ಯವೆನಿಸಿದರೆ ಹೆಚ್ಚಿನ ಸಾಕ್ಷ್ಯಾಧಾರವನ್ನು ತೆಗೆದುಕೊಂಡ ನಂತರ, ಹೊಸ ತೀರ್ಮಾನಕ್ಕಾಗಿ ಅಥವಾ ಸಂದರ್ಭಾನುಸಾರ, ನ್ಯಾಯನಿರ್ಣಯಕ್ಕಾಗಿ ಅದು ಸೂಕ್ತವೆಂದು ಯೋಚಿಸುವಂಥ ನಿರ್ದೇಶನಗಳೊಂದಿಗೆ ಮೊಕದ್ದಮೆಯನ್ನು ಹಿಂದಕ್ಕೆ ಕಳುಹಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ನ್ಯಾಯಾಲಯವು ಮಾಡಿದ ಯಾವುದೇ ಆದೇಶದ ವಿರುದ್ಧ ಮತ್ತೆ ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ.

## ಅಧ್ಯಾಯ – IV

## ಅಪರಾಧಗಳು ಮತ್ತು ದಂಡನೆಗಳು

**16. ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** (1) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ, ಆತನು,–

(ಎ) ಮೊದಲನೇ ಅಪರಾಧಕ್ಕಾಗಿ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ;

(ಬಿ) ತರುವಾಯದ ಪ್ರತಿಯೊಂದು ಅಪರಾಧಕ್ಕಾಗಿ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ

– ದಂಡಿತನಾಗತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ 2) ಏನೇ ಒಳಗೊಂಡಿದ್ದರೂ, 4ಎ ಪ್ರಕರಣದ ಉಲ್ಲಂಘನೆಯು ಈ ಪ್ರಕರಣದ ಮೇರೆಗೆ ಸಂಜ್ಞೇಯ ಅಪರಾಧವಾಗಿರತಕ್ಕದ್ದು.

**17. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ, ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಯಾರೇ ಅಂಥ ವ್ಯಕ್ತಿಯು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಆ ಫರ್ಮಿನಲ್ಲಿನ ಪಾಲುದಾರ.

**18. ಅಪರಾಧಗಳ ಸಂಜ್ಞೇಯತೆ.–** ಯಾವುದೇ ನ್ಯಾಯಾಲಯವು, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕೇಂದ್ರ ಸರ್ಕಾರದ (ಎ) ಗುಂಪಿನ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಯಾರೇ ಅಧಿಕೃತ ಅಧಿಕಾರಿಯು ಫಿರ್ಯಾದನ್ನು ಲಿಖಿತದಲ್ಲಿ ಸಲ್ಲಿಸಿದ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ - V

### ಸಂಕೀರ್ಣ

**19. ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳ ಪ್ರಸರಣವನ್ನು ನಿಷೇಧಿಸುವ ಅಧಿಕಾರ.–** 5ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ನಿಯಮಿಸಿದ ಕಾರ್ಯಕ್ರಮ ಸಂಹಿತೆಗೆ ಮತ್ತು 6ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಜಾಹೀರಾತು ಸಂಹಿತೆಗೆ ಅನುಗುಣವಾಗಿಲ್ಲದಿರುವ ಅಥವಾ ಧರ್ಮ, ಜನಾಂಗ, ಭಾಷೆ, ಜಾತಿ ಅಥವಾ ಸಮುದಾಯದ ಆಧಾರಗಳ ಮೇಲೆ ಅಥವಾ ಇತರೆ ಯಾವುದೇ ಆಧಾರದ ಮೇಲೆ ವಿವಿಧ ಧರ್ಮಗಳ, ಜನಾಂಗಗಳ, ಭಾಷೆಗಳ ಅಥವಾ ಪ್ರಾದೇಶಿಕ ಗುಂಪುಗಳ ಅಥವಾ ಜಾತಿಗಳ ಅಥವಾ ಸಮುದಾಯಗಳ ನಡುವೆ ವೈಷಮ್ಯದ ಅಥವಾ ವೈಮನಸ್ಸಿನ, ವೈರದ ಅಥವಾ ದ್ವೇಷದ ಭಾವನೆಗಳನ್ನು ಬೆಳೆಸುವ ಸಂಭವವಿರುವ ಅಥವಾ ಸಾರ್ವಜನಿಕ ಶಾಂತಿಗೆ ಭಂಗವುಂಟು ಮಾಡುವ ಸಂಭವವಿರುವ, ಯಾವುದೇ ಕಾರ್ಯಕ್ರಮವನ್ನು ಅಥವಾ ಚಾನೆಲ್‌ನ್ನು, ಪ್ರಸರಣ ಮಾಡದಂತೆ ಅಥವಾ ಮರುಪ್ರಸರಣ ಮಾಡದಂತೆ ಯಾರೇ ಕೇಬಲ್ ಆಪರೇಟರನನ್ನು ನಿಷೇಧಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಅಥವಾ ವಿಹಿತವೆಂದು ಯಾರೇ ಅಧಿಕೃತ ಅಧಿಕಾರಿಯು ಭಾವಿಸಿದರೆ, ಅವನು ಆದೇಶದ ಮೂಲಕ ಹಾಗೆ ಮಾಡಬಹುದು.

**20. ಸಾರ್ವಜನಿಕ ಹಿತದೃಷ್ಟಿಯಿಂದ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಕಾರ್ಯಾಚರಣೆಯನ್ನು ನಿಷೇಧಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಸಂಬಂಧವಾಗಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳಲ್ಲಿ ಯಾವುದೇ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಕಾರ್ಯಾಚರಣೆಯನ್ನು ನಿಷೇಧಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಅಥವಾ ವಿಹಿತವೆಂದು ಭಾವಿಸಿದರೆ, ಅದು ಹಾಗೆ ಮಾಡಬಹುದು.

(2) ಕೇಂದ್ರ ಸರ್ಕಾರವು,–

(i) ಭಾರತದ ಸಾರ್ವಭೌಮತ್ವದ ಮತ್ತು ಅಖಂಡತೆಯ; ಅಥವಾ

(ii) ಭಾರತದ ಭದ್ರತೆಯ; ಅಥವಾ

(iii) ಯಾವುದೇ ವಿದೇಶಿ ರಾಷ್ಟ್ರದೊಂದಿಗೆ ಭಾರತದ ಸ್ನೇಹಪರ ಸಂಬಂಧಗಳ; ಅಥವಾ

(iv) ಸಾರ್ವಜನಿಕ ಸುವ್ಯವಸ್ಥೆಯ, ಸಭ್ಯತೆಯ ಅಥವಾ ನೈತಿಕತೆಯ,–

– ಹಿತದೃಷ್ಟಿಯಿಂದ ಯಾವುದೇ ಚಾನೆಲ್‌ನ ಅಥವಾ ಕಾರ್ಯಕ್ರಮದ ಪ್ರಸರಣವನ್ನು ಅಥವಾ ಮರುಪ್ರಸರಣವನ್ನು ವಿನಿಯಮಿಸುವುದು ಅಥವಾ ನಿಷೇಧಿಸುವುದು ಅವಶ್ಯಕ ಅಥವಾ ವಿಹಿತವೆಂದು ಭಾವಿಸಿದರೆ ಆದೇಶದ ಮೂಲಕ ಅದು ಹಾಗೆ ಮಾಡಬಹುದು.

(3) ಕೇಂದ್ರ ಸರ್ಕಾರವು, ಯಾವುದೇ ಚಾನೆಲ್‌ನ ಯಾವುದೇ ಕಾರ್ಯಕ್ರಮವು 5ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ನಿಯಮಿಸಿದ ಕಾರ್ಯಕ್ರಮ ಸಂಹಿತೆಗೆ ಅಥವಾ 6ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ನಿಯಮಿಸಲಾದ ಜಾಹೀರಾತು ಸಂಹಿತೆಗೆ ಅನುಗುಣವಾಗಿಲ್ಲವೆಂದು ಕೇಂದ್ರ ಸರ್ಕಾರವು ಪರಿಗಣಿಸಿದರೆ ಅದು ಆದೇಶದ ಮೂಲಕ ಅಂಥ ಕಾರ್ಯಕ್ರಮದ ಪ್ರಸರಣವನ್ನು ಅಥವಾ ಮರುಪ್ರಸರಣವನ್ನು ವಿನಿಯಮಿಸಬಹುದು ಅಥವಾ ನಿಷೇಧಿಸಬಹುದು.

**21. ಇತರೆ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗಿಲ್ಲ.–** ಈ ಅಧಿನಿಯಮದ ಉಪಬಂಧಗಳು, ಔಷಧ ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, 1940ರ (1940ರ 23), ಔಷಧಗಾರಿಕೆ ಅಧಿನಿಯಮ, 1948 (1948ರ 8), ಲಾಂಛನಗಳು ಮತ್ತು ಹೆಸರುಗಳ (ಅನುಚಿತ ಉಪಯೋಗವನ್ನು ಪ್ರತಿಬಂಧಿಸುವುದು) ಅಧಿನಿಯಮ, 1950 (1950ರ 12), ಔಷಧಗಳ (ನಿಯಂತ್ರಣ) ಅಧಿನಿಯಮ, 1950 (1950ರ 26), ಚಲನಚಿತ್ರ ಅಧಿನಿಯಮ, 1952 (1952ರ 37), ಔಷಧಗಳ ಮತ್ತು ಐಂದ್ರಜಾಲಿಕ ಪರಿಹಾರಗಳ (ಆಕ್ಷೇಪಾರ್ಹ ಜಾಹೀರಾತುಗಳ) ಅಧಿನಿಯಮ, 1954 (1954ರ 21), ಆಹಾರ ಕಲಬೆರೆಕೆ ಅಧಿನಿಯಮ, 1954 (1954ರ 37), ಬಹುಮಾನ ಸ್ಪರ್ಧೆಗಳ ಅಧಿನಿಯಮ, 1955 (1955ರ 42), ಕೃತಿಸ್ವಾಮ್ಯ ಅಧಿನಿಯಮ, 1957 (1957ರ 14), ವ್ಯಾಪಾರ ಮತ್ತು ವಾಣಿಜ್ಯ ಗುರುತುಗಳ ಅಧಿನಿಯಮ, 1958 (1958ರ 43), ಮಹಿಳಾ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (1986ರ 60) ಮತ್ತು ಗ್ರಾಹಕ ರಕ್ಷಣಾ ಅಧಿನಿಯಮ, 1986 (1986ರ 68)– ಇವುಗಳಿಗೆ ಹೆಚ್ಚಿಗೆಯಾಗಿ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಇರತಕ್ಕದ್ದಲ್ಲ.

**22. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲ ವಿಷಯಗಳ ಅಥವಾ ಯಾವುದೇ ವಿಷಯದ ಸಂಬಂಧದಲ್ಲಿ ಉಪಬಂಧ ಕಲ್ಪಿಸಬಹುದು, ಎಂದರೆ.–

(ಎ) 4ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅರ್ಜಿ ನಮೂನೆ ಮತ್ತು ಸಂದಾಯ ಮಾಡಬೇಕಾದ ಫೀಜು;

(ಎಎ) 4ಎ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಚಂದಾ ದರಗಳನ್ನು ಪ್ರಕಟಿಸುವ ವಿಧಾನ ಮತ್ತು ಅಂಥ ಚಂದಾಗಳನ್ನು ಯಾವ ನಿಯತಕಾಲಿಕ ಮಧ್ಯಂತರಗಳಲ್ಲಿ ಸಂದಾಯ ಮಾಡಬೇಕೋ ಆ ನಿಯತಕಾಲಿಕ ಮಧ್ಯಂತರಗಳು;

(ಎಎಎ) 4ಎ ಪ್ರಕರಣದ (9)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಸಲ್ಲಿಸುವ ನಮೂನೆ ಮತ್ತು ರೀತಿ ಮತ್ತು ಅಂಥ ವರದಿಯನ್ನು ಯಾವ ಮಧ್ಯಂತರಗಳಲ್ಲಿ ಆ ಉಪಪ್ರಕರಣದ ಮೇರೆಗೆ ನಿಯತಕಾಲಿಕವಾಗಿ ಸಲ್ಲಿಸಬೇಕೋ ಆ ಮಧ್ಯಂತರಗಳು;

(ಬಿ) 5ನೇ ಪ್ರಕರಣದ ಮೇರೆಗೆ ಕಾರ್ಯಕ್ರಮ ಸಂಹಿತೆ;

(ಸಿ) 6ನೇ ಪ್ರಕರಣದ ಮೇರೆಗೆ ಜಾಹೀರಾತು ಸಂಹಿತೆ;

(ಡಿ) 7ನೇ ಪ್ರಕರಣದ ಮೇರೆಗೆ ಕೇಬಲ್ ಆಪರೇಟರನು ನಿರ್ವಹಿಸಬೇಕಾದ ರಿಜಿಸ್ಟರಿನ ನಮೂನೆ;

(ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರೆ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**23. ನಿರಸನ ಮತ್ತು ಉಳಿಸುವಿಕೆಗಳು.–** (1) ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ (ವಿನಿಯಮನ) ಅಧ್ಯಾದೇಶ, 1995 (1995ರ ಅಧ್ಯಾದೇಶ 3) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಸಂವಾದಿ ಉಪಬಂಧದ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * *